ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ

ಆನಂದರಾವ್ ವೃತ್ತ, ಬೆಂಗಳೂರು.-09

ಸಂಖ್ಯೆ: ಆಕುಕನಿ/ಆಪ್ರ/202/2019-20 ದಿನಾಂಕ: 27-03-2020.

## ಸುತ್ತೋಲೆ

ವಿಷಯ : ಕೋವಿಡ್-19 ಚಿಕಿತ್ಸೆಗೆ ಸಕ್ರಿಯ ಸ್ಪಂದನೆ ತಂಡವು (Rapid Response Team) ಭೇಟಿ ನೀಡುವ ಸಮಯದಲ್ಲಿ ಅಗತ್ಯ ಸುರಕ್ಷ ಸಲಕರಣೆಗಳನ್ನು ಒದಗಿಸುವ ಬಗ್ಗೆ.

*******

ರಾಜ್ಯದಲ್ಲಿ ಕೋವಿಡ್-19 ಪಸರಿಸುತ್ತಿರುವ ಹಿನ್ನೆಲೆಯಲ್ಲಿ, ಕೋವಿಡ್-19 ಸೋಂಕಿತ ಮತ್ತು ಶಂಕಿತರ ಮಾಹಿತಿ ತಿಳಿದ ತಕ್ಷಣ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿನ ಸಕ್ರಿಯ ಸ್ಪಂದನಾ ತಂಡವು (Rapid Response Team) ಕೋವಿಡ್-19 ಸೋಂಕಿತ ಮತ್ತು ಶಂಕಿತರ ಪ್ರದೇಶಕ್ಕೆ ಸ್ಥಳಗಳಿಗೆ ತೆರಳುವಾಗ ಅವರುಗಳಿಗೆ ಅಗತ್ಯ ಸಲಕರಣೆಗಳನ್ನು ಒದಗಿಸುವ ಮತ್ತು ಸಮುದಾಯ ಬೇಟಿಯ ಸಂದರ್ಭದಲ್ಲಿ ಕೆಳಕಂಡ ಸೂಕ್ತ ಕ್ರಮಗಳನ್ನು ಅನುಸರಿಸಲು ಸೂಚಿಸಿದೆ.

1. ತಂಡದ ಪ್ರತಿ ಸದಸ್ಯರುಗಳಿಗೆ, ವಯಕ್ತಿಕ ಸುರಕ್ಷಾ ಕವಚ, ಮೂರು ಪದರುಗಳುಳ್ಳ ಮುಖಗವಸು, ಕೈಗಳ ಶುಚಿತ್ವಕ್ಕಾಗಿ ಸೂಕ್ತ ಮಾರ್ಜಕಗಳನ್ನು ತಪ್ಪದೇ ನೀಡುವುದು.
2. ಸೋಂಕಿತ ಮತ್ತು ಶಂಕಿತರ ವಾಸದ ಸ್ಥಳಗಳಿಗೆ ತೆರಳಿದಾಗ ವಯಕ್ತಿಕ ಸುರಕ್ಷಾ ಕವಚ, ಮುಖಗವಸನ್ನು ದರಿಸಿ ಸೋಂಕಿತ/ಶಂಕಿತ ವ್ಯಕ್ತಿಗಳನ್ನು ಕನಿಷ್ಠ ಒಂದು ಮೀಟರ್ (ಮೂರು ಅಡಿ) ಅಂತರದಲ್ಲಿ ಸಮಾಲೋಚನೆಯನ್ನು ಮಾಡುವುದು. ಮತ್ತು ತಾವು ದರಿಸಲ್ಪಟ್ಟ ವಯಕ್ತಿಕೆ ರಕ್ಷಕ ಸಾಧನಗಳನ್ನು ಎಚ್ಚರಿಕೆಯಿಂದ ವಿಲೇವಾರಿ ಮಾಡುವುದು.
3. ತಂಡವು ತೆರಳಲು ಅಗತ್ಯ ಸುಸಜ್ಜಿತ ವಾಹನ ವ್ಯವಸ್ಥೆಯನ್ನು ಮಾಡುವುದು ಮತ್ತು ವಾಹನವನ್ನು ಸೂಕ್ತ ದ್ರಾವಣವನ್ನು ಬಳಸಿ (Hypochlorite Solution-01%) ಶುಚಿತ್ವಗೊಳಿಸುವುದು.
4. ಸಮುದಾಯಕ್ಕೆ ತೆರಳುವ ತಂಡವು ಜನಸಮಾನ್ಯರ ಸೂಕ್ಷ್ಮತೆಯನ್ನು ಗಮನಿಸಿ ನಂತರದಲ್ಲಿ ಅವರಿಗೆ ಸೂಕ್ತ ತಿಳುವಳಿಕೆ ಮತ್ತು ಮಾರ್ಗದರ್ಶನವನ್ನು ನೀಡುವುದರ ಬಗ್ಗೆ ಪ್ರೇರೇಪಿಸುವುದು.

ನಿರ್ದೇಶಕರು
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು,**
**ಬೆಂಗಳೂರು**

**ಗೆ:**

1. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
2. ಎಲ್ಲಾ ಜಿಲ್ಲಾ ಸರ್ವೇಕ್ಷಣ ಅಧಿಕಾರಿಗಳು

**ಪ್ರತಿಯನ್ನು ಮಾಹಿತಿಗಾಗಿ :**

1. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕು.ಕ.ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಮಾನ್ಯ ಆಯುಕ್ತರು, ಆರೋಗ್ಯ ಮತ್ತು ಕು.ಕ.ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.
3. ಮಾನ್ಯ ಅಭಿಯಾನ ನಿರ್ದೇಶಕರು-ಎನ್.ಹೆಚ್.ಎಂ., ಆನಂದರಾವ್ ವೃತ್ತ,